## ಕರ್ನಾಟಕ ಸರ್ಕಾರದ ನಡವಳಿಗಳು

| | |
|---|---|
| ವಿಷಯ | **2016-17ನೇ ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯ ಅನಿಲ ಯೋಜನೆಯಡಿ 2015-16ನೇ ಸಾಲಿನಲ್ಲಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಬಾಕಿ ಇರುವ ರಾಜ್ಯ ಸಹಾಯಧನ ಬಿಡುಗಡೆ ಕುರಿತು** |
| ಓದಲಾಗಿದೆ | **ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 48 ಜೈಅಯೋ 2016, ದಿನಾಂಕ 23.07.2016 & 27.08.2016** |

### ಪ್ರಸ್ತಾವನೆ :

2016-17ನೇ ಸಾಲಿನ ರಾಜ್ಯ ಆಯವ್ಯಯದ **ಲೆಕ್ಕ ಶೀರ್ಷಿಕೆ 2810-01-198-1-01-300 (Lumpsum)** ರಡಿಯಲ್ಲಿ ರೂ.150.00 ಲಕ್ಷಗಳನ್ನು ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ ನಿರ್ಮಿಸಲಾದ ಜೈವಾನಿಲ ಸ್ಥಾವರಗಳಿಗೆ ಹಿಂದಿನ ಸಾಲುಗಳ ಬಾಕಿ ರಾಜ್ಯ ಸಹಾಯಧನ ಪಾವತಿಗಾಗಿ **ಅನಿಲ ಯೋಜನೆಯಡಿ** ನಿಗದಿಪಡಿಸಿದೆ. ಈ ಪೈಕಿ **ರೂ.75.00** ಲಕ್ಷಗಳನ್ನು ಮೇಲೆ ಓದಲಾದ ಆದೇಶಗಳಲ್ಲಿ ಸಂಬಂಧಿತ ಜಿಲ್ಲೆಗಳಿಗೆ ಬಿಡುಗಡೆ ಮಾಡಿದೆ.

ಮುಂದುವರಿದು, 2016-17ನೇ ಸಾಲಿನಲ್ಲಿ **2015-16ನೇ** ಸಾಲಿನಲ್ಲಿ ನಿಗದಿಪಡಿಸಿದ ಗುರಿಗಳನ್ವಯ, ಸಾಧಿಸಿದ ಪ್ರಗತಿಗನುಗುಣವಾಗಿ SCP/TSP/ ಸಾಮಾನ್ಯ ವರ್ಗದಡಿ ನಿರ್ಮಿಸಲಾದ ಅನಿಲ ಸ್ಥಾವರಗಳ ರಾಜ್ಯ ಸಹಾಯಧನ ಬಾಕಿ ಪಾವತಿಗಾಗಿ ಅನಿಲ ಯೋಜನೆಯಡಿ **ರೂ.67.62ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 2810-01-198-1-01-300ರಡಿ** ಬೆಳಗಾವಿ, ದಕ್ಷಿಣ ಕನ್ನಡ, ಕಲಬುರುಗಿ ಮತ್ತು ಯಾದಗಿರಿ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/48/ಜೈಅಯೋ/2016, ಬೆಂಗಳೂರು, ದಿನಾಂಕ 15.12.2016**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, **2016-17ನೇ ಸಾಲಿನಲ್ಲಿ**, 2015-16ನೇ ಸಾಲಿಗೆ ಸಂಬಂಧಿಸಿದಂತೆ SCP/TSP/ ಸಾಮಾನ್ಯ ವರ್ಗದಡಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ರಾಜ್ಯ ಸಹಾಯಧನ ಬಾಕಿ ಪಾವತಿಗಾಗಿ ಅನಿಲ ಯೋಜನೆಯಡಿ **ರೂ.67.62ಲಕ್ಷ**(ಅರವತ್ತೇಳು ಲಕ್ಷದ ಅರವತ್ತೆರಡು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಅಗತ್ಯತೆಯನುಸಾರ ಕೆಳಕಂಡ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

| ಕ್ರಸಂ | ಜಿಲ್ಲಾ ಪಂಚಾಯತ್ | ಬಿಡುಗಡೆ ಮಾಡಿದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1 | ಬೆಳಗಾವಿ | 54.09 |
| 2 | ದಕ್ಷಿಣ ಕನ್ನಡ | 4.00 |
| 3 | ಕಲಬುರುಗಿ | 5.53 |
| 4 | ಯಾದಗಿರಿ | 4.00 |
| | ಒಟ್ಟು | **67.62** |

ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟು ಬಿಡುಗಡೆ ಮಾಡಲಾಗುತ್ತಿದ್ದು, ಉದ್ದೇಶಿತ ಕಾರ್ಯಕ್ರಮಕ್ಕಾಗಿ ಮಾತ್ರ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಅನುದಾನವನ್ನು ಮಾರ್ಗಪಲ್ಲಟ ಹಾಗೂ ವ್ಯಪಗತ ಮಾಡತಕ್ಕದಲ್ಲ. **ಪ್ರಸ್ತುತ ಬಿಡುಗಡೆ ಮಾಡುತ್ತಿರುವ ಸದರಿ ಅನುದಾನವನ್ನು ಗಾಂಧಿ ಸಾಕ್ಷಿ ಕಾಯಕದಡಿ ಇಂಧೀಕರಿಸಿ ಬಿಡುಗಡೆ ಮಾಡತಕ್ಕದ್ದು ಹಾಗೂ 2015-16ನೇ ಸಾಲಿಗೆ ಸಂಬಂಧಿಸಿದಂತೆ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ರಾಜ್ಯ ಸಹಾಯಧನವನ್ನು ಪೂರ್ಣ ಪ್ರಮಾಣದಲ್ಲಿ ಬಿಡುಗಡೆ ಮಾಡಿದೆ.**

ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಲೆಕ್ಕ ಶೀರ್ಷಿಕೆ **2810-01-198-1-01-300**ರಡಿ ವೆಚ್ಚ ಭರಿಸಿ, ನಿಗದಿತ ನಮೂನೆಯಲ್ಲಿ ಹಣಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ನೀಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ **ಸಂಖ್ಯೆ** : ಎಫ್‌ಡಿ 03 ಟಿಎಫ್‌ಪಿ 2016 ದಿನಾಂಕ 02.04.2016ರನ್ವಯ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದಡಿ ಇಲಾಖಾ ಅಂತರಿಕ ಆರ್ಥಿಕ ಸಲಹೆಗಾರರ ಸಹಮತಿ ಸಂಖ್ಯೆ: ಗ್ರಾಅಪ 544 ಪಿಬಿಎಸ್ 2016, ದಿನಾಂಕ 26.11.2016ರಲ್ಲಿ ಸಹಮತಿಯನ್ನು ಪಡೆದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಡಾ:ಬೂವನಹಳ್ಳಿ ನಾಗರಾಜ್)**
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಳಗಾವಿ, ದಕ್ಷಿಣ ಕನ್ನಡ, ಕಲಬುರುಗಿ, ಮತ್ತು ಯಾದಗಿರಿ
3. ಜಿಲ್ಲಾ ಖಜಾನಾಧಿಕಾರಿಗಳು, ಬೆಳಗಾವಿ, ದಕ್ಷಿಣ ಕನ್ನಡ, ಕಲಬುರುಗಿ, ಮತ್ತು ಯಾದಗಿರಿ
4. ಉಪ ನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್ ನಂ. 49, ಸೆಕೆಂಡ್ ಬ್ಲಾಕ್, ಸೆಕೆಂಡ್ ಫ್ಲೋರ್, ಖನಿಜ ಭವನ, ಸೌತ್ ಎಂಟ್ರನ್ಸ್, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
5. ವಿಶೇಷ ಅಧಿಕಾರಿಗಳು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು :

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಸರ್ಕಾರದ ಪ್ರದಾನ ಕಾರ್ಯದರ್ಶಿಗಳು (ಪಂ.ರಾ) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಅಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿಗಳು.